ನಾ ಮುಂದೆ ರಂಗ (ಕೃಷ್ಣ) ನೀ ಎನ್ನ ಹಿಂದೆ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 118.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 458.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 319.
4. **Note:** The lyrics given in yellow highlights are as per Ref. 2. But the lyrics are different in Ref. 1 and are given separately without any highlights. The wordings in Ref. 3 are almost similar to Ref. 2.
5. **Note:** Singer has followed lyrics as in Ref. 2.

ರಾಗ ಕಾಂಬೋಧಿ ಝಂಪೆ ತಾಳ	ರಾಗ ಕಾನಡ ತಾಳ ಅಟ್ಟ
ನಾ ಮುಂದೆ ರಂಗ ನೀ ಎನ್ನ ಹಿಂದೆ	ನಾ ಮುಂದೆ ಕೃಷ್ಣ ನೀ ಎನ್ನ ಹಿಂದೆ
ಎಂದೆಂದು ನಿನ್ನ ನಾಮವ ಎಂದೆಂಬೆ ‖ ಪ ‖	ನಾಮವೇ ಕಾಯಿತು ನಾನೇನೆಂದೆ
ಅನಾಥನು ನಾನು ಎನಗೆ ಬಂಧು ನೀನು	ಅನಾಥನ್ಯೆ ನಾನು ಎನಗೆ ಬಂಧುವು ನೀನು
ಹೀನನು ನಾನು ದಯವಂತ ನೀನು	ದೀನ ಮಾನವ ನಾನು ದಯವಂತ ನೀನು
ಧ್ಯಾನ ಮಂತ್ರನು ನೀನು ಧ್ಯಾನಿಸುವೆನು ನಾನು	ದಾನವಾಂತಕ ನೀನು ಧ್ಯೇನಿಸುವೆನು ನಾನು
ಜ್ಞಾನಗಮ್ಯನು ನೀನು ಅಜ್ಞಾನಿ ನಾನು ‖ 1 ‖	ಜ್ಞಾನಗಭೀರ ನೀನು ಅಜ್ಞಾನಿ ನಾನು
ಸುರತರುವು ನೀನು ಫಲ ಬಯಸುವನು ನಾನು	ಸುರತರು ನೀನು ಫಲ ಬಯಸುವೆ ನಾನು
ಸುರಧೇನು ನೀನು ಕರೆದುಂಬೆ ನಾನು	ಸುರಧೇನು ನೀನು ಕರೆದುಂಬೆ ನಾನು
ವರ ಚಿಂತಾಮಣಿ ನೀನು ಪರಿ ಚಿಂತಿಸುವೆನು ನಾನು	ವರ ಚಿಂತಾಮಣಿ ನೀನು ಪರಿ ಚಿಂತಿಸುವೆನು ನಾನು
ಶರಧಿಕ್ಷೀರನು ನೀನು ತರಳನು ನಾನು ‖ 2 ‖	ಶರಧಿಕ್ಷೀರನು ನೀನು ತರಳನ್ಯೆ ನಾನು
ಒಂದರೊಳೊಂದೊಂದು ಅವಗುಣವ ಹೊಂದಿದೆ	ಒಂದರೊಳೊಂದೊಂದು ನಿನಗೆ ನಾ ಸಲಿಸುವೆ
ಕಂದನೆಂದೆತ್ತಿಕೊ ಸಲಹೊ ಬೇಗ	ಚೆಂದವಾಯಿತು ನಿನ್ನ ಸ್ತುತಿಯಿಂದಲಿ
ತಂದೆ ಶ್ರೀ ಪುರಂದರ ವಿಠಲ ರಾಯ ನೀ	ತಂದೆ ಪುರಂದರ ವಿಠಲ ರಾಯ ನೀ
ಬಂದೆನ್ನ ಮನದಲಿ ನಲಿ ನಲಿದಾಡು ‖ 3 ‖	ಬಂದೆನ್ನ ಮನದಲ್ಲಿ ನಲಿ ನಲಿದಾಡೊ

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಜೀವಾತ್ಮ – ಪರಮಾತ್ಮರು ಪರಸ್ಪರ ಸಮ್ಮುಖರಾಗಿರುವುದು ನಿತ್ಯ ಸಂಬಂಧ. 'ದ್ವಾ ಸುಪರ್ಣಾ' ಎಂದು ಮೊದಲಾಗುವ ಶ್ರುತಿ ಹೇಳುವುದು ಇದನ್ನೇ. ಆದರೆ ಪರಮಾತ್ಮನ ಸಂಕಲ್ಪದಿಂದಲೇ ಅನ್ಯಥಾಜ್ಞಾನವೊದಗಿದಾಗ ಅದರ ಫಲವಾಗಿ ಹರಿವಿಸ್ಮರಣೆ ತೋರಿಕೊಳ್ಳುವುದು. ಇದರಿಂದ, ತನ್ನೊಳಗೇ ಅಂತರ್ಯಾಮಿಯಾಗಿ, ಬಿಂಬನಾಗಿ, ಇರುವ ಪರಮಾತ್ಮನನ್ನು ಜೀವನು ಕಾಣದೆ ಪರಿತಪಿಸುತ್ತಾನೆ. ಗುರೂಪದೇಶದಿಂದ, ಸಾಧುಸಂಗದಿಂದ, ಮಾಹಾತ್ಮ್ಯ ಜ್ಞಾನವೊದಗಿದಾಗ ಜೀವನಿಗೆ ತಾನು ಪ್ರತಿಬಿಂಬ, ಪರಮಾತ್ಮನು ತನಗೆ ಬಿಂಬ ಎಂಬ ಅರಿವುಂಟಾಗುತ್ತದೆ. ಆ ಭಾವದೊಂದಿಗೆ ಸಾಧಕನಿಗೆ ಪರಮಾತ್ಮನ ಸರ್ವಜ್ಞತ್ವ, ಸರ್ವಶಕ್ತಿತ್ವ, ಅಂಶಿತ್ವ, ಸರ್ವ ಸ್ವಾತಂತ್ರ್ಯ, ವೇದವೇದ್ಯತ್ವ, ಕಾರುಣ್ಯ ಮೊದಲಾದ ಕಲ್ಯಾಣ ಗುಣಗಳು ಮನದಟ್ಟಾಗುತ್ತವೆ; ಸಾಧಕನ ಅಲ್ಪಜ್ಞತ್ವ, ಅಲ್ಪಶಕ್ತಿತ್ವ, ಅಂಶತ್ವ, ಅಸ್ವಾತಂತ್ರ್ಯ, ದೈನ್ಯ ಮೊದಲಾದ ಅವಗುಣಗಳ ಅನುಭವವೂ ಆಗುತ್ತದೆ. ಇದನ್ನು ಈ ಪದ ಎತ್ತಿ ತೋರಿಸುತ್ತದೆ.

ನಿನ್ನ ನಾಮವ ಎಂದೆಂಬ (ನಾ) – ನಿನ್ನ ನಾಮಸ್ಮರಣೆಯನ್ನೇ ಮಾಡುತಿರುವ ನಾನು.

ಬಂಧು – ಅನಿಮಿತ್ತ ಬಂಧು; ಆಶ್ರಯ, ಪ್ರೇರಕ, ನಿಯಾಮಕ.

ಹೀನ – ಪರಾಧೀನ.

ಶರಧಿಕ್ಷೀರ – ಕ್ಷೀರಶರಧಿ; ಕ್ಷೀರ ಸಾಗರ, ಪಾಲಗಡಲು; ಎಂದರೆ ಅಷ್ಟು ದೊಡ್ಡವನು; ನಾನಾದರೋ ಸಣ್ಣವನು (ತರಳ).

ಸುರತರು = ಕಲ್ಪತರು

ಸುರಧೇನು = ಕಾಮಧೇನು

ಜ್ಞಾನ ಗಭೀರ = ಆಳವಾದ ಜ್ಞಾನವುಳ್ಳವ

ಒಂದರೊಳೊಂದೊಂದು ನಿನಗೆ ನಾ ಸಲಿಸುವೆ = ನಿನ್ನ ಒಂದೊಂದು ಅವಯವಗಳಲ್ಲಿ ನನ್ನ ಇಂದ್ರಿಯಗಳನ್ನು ಸಮರ್ಪಿಸುತ್ತೇನೆ

Classification: Keerthane
Ankita: tande purandara vittala
Location: NA
Category: bhakti, vidhi chintane, Aartha Bhava.
Sub-Category: ranga, Krishna, bandhu, daya, Dhyana, mantra, jnana, Samudra, kamadhenu, kalpataru, ksheera,
Pravachana: NA
Explanation: NA